ದಿನಾಂಕ 21-11-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ MDP ವಕೀಲರಿಂದ.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿದೆ. ಈ ದಾವೆಯಲ್ಲಿ ಸಾಬಣ್ಣ ಅವರು ಮಲ್ಲಮ್ಮ ಅವರ ವಿರುದ್ಧ ಹೂಡಿರುತ್ತಾರೆ. ದಾವಾ ಆಸ್ತಿ 5 ವರೆ ಎಕರೆ ಇರುತ್ತದೆ. ಈ ದಾವೆಯನ್ನು ಪೂರ್ತಿ 5 ವರೆ ಎಕರೆ ಜಮೀನಿನ ಮೇಲೆ ಹೂಡಲಾಗಿದೆ. ದಾವಾ ಆಸ್ತಿ ಮೊದಲು ಹನುಮಂತ ಅವರ ಜಮೀನು ಇರುತ್ತದೆ. ಹನುಮಂತ ಅವರಿಗೆ ಇಬ್ಬರು ಮಕ್ಕಳು ಅವರು ಭೀಮಣ್ಣ ಮತ್ತು ಲಿಂಗಪ್ಪ ಆಗಿರುತ್ತಾರೆ. ಭೀಮಣ್ಣ ಅವರು ತೀರಿಕೊಂಡ ನಂತರ ದಾವಾ ಆಸ್ತಿಯನ್ನು ವಾದಿ ಹೆಸರಿಗೆ ಮಾಡಲಾಗಿದೆ. ದಾವಾ ಸರ್ವೆ ನಂಬರನಲ್ಲಿ 2 ಎಕರೆ ಜಮೀನನ್ನು ಸಾಬಣ್ಣ ತಂದೆ ದುರುಗಪ್ಪ ಅವರಿಗೆ ಮಾರಾಟ ಮಾಡಲಾಗಿದೆ. ಈ ಜಮೀನನ್ನು ಹೊರತುಪಡಿಸಿ ದಾವಾ ಸರ್ವೇ ನಂಬರನಲ್ಲಿ ಬೇರೆ ಜಮೀನನ್ನು ಮಾರಾಟ ಮಾಡಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ವಾದಿಗೆ ಬೇರೆ ಜಮೀನು ಇರುವುದಿಲ್ಲ. ಹನುಮಂತ ತಂದೆ ಲಿಂಗಪ್ಪ ಅವರು ಭೀಮಣ್ಣನ ತಮ್ಮ ಆಗಿರುತ್ತಾರೆ. ಹನುಮಂತ ತಂದೆ ಲಿಂಗಪ್ಪ ಅವರು 1 ನೇ ಪ್ರತಿವಾದಿಗೆ ಸಂಬಂಧ ಇಲ್ಲ. ಹನುಮಂತ ತಂದೆ ಲಿಂಗಪ್ಪ 1 ನೇ ಪ್ರತಿವಾದಿಯ ಗಂಡ ಎಂದರೆ ನಿಜ. ಹನುಮಂತ ತಂದೆ ಲಿಂಗಪ್ಪ ಅವರಿಗೆ ಮೂರು ಜನ ಮಕ್ಕಳು ಇರುತ್ತಾರೆ. ಹನುಮಂತ ತಂದೆ ಲಿಂಗಪ್ಪ ಅವರಿಗೆ ನಾನು ಸಂಬಂಧಿಕನಲ್ಲ. ನನ್ನ ಅಡ್ಡ ಹೆಸರು ಮಂಡಲಗುಡ್ಡದವರು ಎಂದು ಇದ್ದು, ಹನುಮಂತ ತಂದೆ ಲಿಂಗಪ್ಪ ಅವರ ಅಡ್ಡ ಹೆಸರು ಸಹ ಅದೇ ಆಗಿರುತ್ತದೆ. ಹನುಮಂತ ತಂದೆ ಲಿಂಗಪ್ಪ ನನಗೆ ಸಹೋದರ ಸಂಬಂಧಿ ಆಗಬೇಕು ಆದರೂ ಸಹ ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹನುಮಂತ ತಂದೆ ಲಿಂಗಪ್ಪ ಅವರು 2 ಎಕರೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೇ ನಂ.24 ಇರುತ್ತದೆ. ದಾವಾ ಸರ್ವೇ ನಂಬರನಲ್ಲಿ ಪಶ್ಚಿಮ ದಿಕ್ಕಿಗೆ ಹನುಮಂತ ತಂದೆ ಲಿಂಗಪ್ಪ ಅವರು 2 ಎಕರೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಖರೀದಿ ಮಾಡಿರಬಹುದು ನನಗೆ ಗೊತ್ತಿಲ್ಲ. ಆ ಜಮೀನನ್ನು ಹನುಮಂತ ತಂದೆ ಲಿಂಗಪ್ಪ 18 ವರ್ಷದ ಹಿಂದೆ 1,60,000/- ರೂ. ಗಳಿಗೆ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಅದರಂತೆ ದಿಃ 20-07-2005 ರಂದು 1,40,000/- ರೂ. ಗಳನ್ನು ಕೊಟ್ಟು ಒಂದು ಛಾಪಾ ಕಾಗದವನ್ನು ಬರೆಸಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆ ಛಾಪಾ ಕಾಗದಕ್ಕೆ ವಾದಿಯ ತಾಯಿ ಶಾಂತಮ್ಮ ಹಾಗೂ ವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ ದಿಃ 19-04-2006 ರಂದು 20,000/- ರೂ. ಹಣವನ್ನು ಕೊಟ್ಟು ಒಂದು ಛಾಪಾ ಕಾಗದವನ್ನು ಬರೆಯಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಂತರ ಹನುಮಂತ ತಂದೆ ಲಿಂಗಪ್ಪ ಅವರು 2 ಎಕರೆ ಜಮೀನನ್ನು ತಮ್ಮ ಹೆಸರಿಗೆ ಮುಟೇಶನ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮುಟೇಶನ ಆದಾಗಿನಿಂದ ಹನುಮಂತ ತಂದೆ ಲಿಂಗಪ್ಪ ಅವರು ತಾವು ತೀರಿಕೊಳ್ಳುವವರೆಗೂ ಸದರಿ 2 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದು , ನಂತರ

ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಹನುಮಂತ ತಂದೆ ಲಿಂಗಪ್ಪ ಅವರು ತೀರಿಕೊಂಡು 10-15 ವರ್ಷ ಆಗಿರುತ್ತದೆ. ಹನುಮಂತ ತಂದೆ ಲಿಂಗಪ್ಪ ತೀರಿಕೊಂಡ ನಂತರ 2 ಎಕರೆ ಜಮೀನನ್ನು ಅವರ ಹೆಂಡತಿ ಮುಟೇಶನ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಊರಿನವರು ಪಂಚನಾಮೆಯನ್ನು ಮಾಡಿ ಸದರಿ ಜಮೀನನ್ನು ಹನುಮಂತ ತಂದೆ ಲಿಂಗಪ್ಪ ಅವರ ಹೆಂಡತಿ ಹೆಸರಿಗೆ ಮಾಡಿದ್ದರು ಎಂದರೆ ಸರಿಯಲ್ಲ. ಮುಟೇಶನ ಆದ ನಂತರ 1 ನೇ ಪ್ರತಿವಾದಿಗೆ ಅವರ ಮಕ್ಕಳ ಜೊತೆ ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ತಮ್ಮ ಜಮೀನನ್ನು ಈಗಾಗಲೇ ಮಾರಾಟ ಮಾಡಿದ್ದು , ಅವರಿಗೆ ಯಾವುದೆ ಜಮೀನು ಇರುವುದಿಲ್ಲ 1 ನೇ ಪ್ರತಿವಾದಿಗೆ ಗಂಡ ಇರುವುದಿಲ್ಲ ಆದ ಕಾರಣ ಅವರಿಗೆ ಮೋಸ ಮಾಡಲು ಮತ್ತು ಜಮೀನನ್ನು ಕಬಳಿಸಲು ಸುಳ್ಳು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮೆಣಸಿನಕಾಯಿ ಬೆಳೆ ಇರುತ್ತದೆ. ಈ ಮಾತನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವಾ ಆಸ್ತಿಯ ಕಬ್ಜೆ ಹೊಂದಿರುತ್ತಾರೆ ಎಂದರೆ ಅದು ವಾದಿಯ ಹೊಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ**.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತುಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.